

ಚಾಚಿ ಮರಕಪ್ಪೆ



ಬೂದು ಕಣ್ಣಿನ ಮರಕಪ್ಪೆ.

# ಕಣ್ಮರೆಯಾಗುತ್ತಿರುವ ಮರ ಮಂಡೂಕಗಳು

ಹಾವು, ಚೇಳು, ಹಲ್ಲಿ, ಕಪ್ಪೆಗಳನ್ನು ತಿನ್ನುವ ಮನುಷ್ಯರಿಂದಾಗಿ ಇವುಗಳ ಪೈಕಿ ಕೆಲ ಪ್ರಭೇದಗಳು ವಿನಾಶದ ಅಂಚಿಗೆ ತಲುಪಿರುವುದು ಒಂದೆಡೆ; ಪರಿಸರ ಮಾಲಿನ್ಯ, ಜಲ ಮಾಲಿನ್ಯದಿಂದ ಅದೆಷ್ಟೋ ಪ್ರಭೇದಗಳು ವಿನಾಶದ ಅಂಚಿಗೆ ತಲುಪಿರುವುದು ಇನ್ನೊಂದೆಡೆ.

ನಾಲ್ಕಾರು ವರ್ಷಗಳ ಹಿಂದೆಯಷ್ಟೇ ವಿಜ್ಞಾನಿಗಳು ಮರ ಕಪ್ಪೆಗಳ ಹಲವು ಪ್ರಭೇದಗಳನ್ನು ಕಂಡು ಹಿಡಿದಿದ್ದರು. ಈಗ ಅವು ಅಳಿವಿನ ಅಂಚಿನಲ್ಲಿವೆ ಎಂಬ ಸುದ್ದಿ ಬಂದಿದೆ.

ಅಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಮಳೆಕಾಡಿನಲ್ಲಿ, ಕೋಸ್ಟರಿಕಾದ ಪ್ಲಾಯ ಝುಕೋ, ಆಫ್ರಿಕ ಪಶ್ಚಿಮ ತೀರದ ಒಂದು ಭಾಗವಾಗಿರುವ ದಕ್ಷಿಣ ಹೊಸ ಗಿನಿ, ಕೆನಡಾದ ವಿಸ್ಕಾನ್‌ಸಿನ್ ಮತ್ತು ಮಿನ್ನಿಸೋಟಾಗಳ ನಡುವೆ ಇರುವ ಕಾಡುಗಳಲ್ಲಿ ಮರ ಕಪ್ಪೆಗಳ ಪ್ರಭೇದಗಳನ್ನು ಪತ್ತೆ ಹಚ್ಚಲಾಗಿದೆ.

ಇವುಗಳ ಪಾದ ಮತ್ತು ಪ್ರತಿ ಬೆರಳಿನಲ್ಲಿರುವ ಅಂಟು ರೂಪದ ದ್ರವ ಮರಗಳನ್ನು ಹತ್ತಲು ಸಹಾಯ ಮಾಡುತ್ತದೆ. ಇವುಗಳು ಜೇಡರ ಹುಳು, ಕೀಟ, ಚಿಕ್ಕ ಚಿಕ್ಕ ಕಪ್ಪೆ, ಕೆಲವೊಮ್ಮೆ ಸಸ್ತನಿಗಳನ್ನು ಭಕ್ಷಿಸುತ್ತವೆ.

ಹೆಚ್ಚು ಕಡಿಮೆ 16 ವರ್ಷಗಳ ಕಾಲ ಬದುಕುವ ಬಹುತೇಕ ಮರ ಕಪ್ಪೆಗಳ ಚರ್ಮಕ್ಕೆ ವೈರಸ್ ಮತ್ತು ಬ್ಯಾಕ್ಟೀರಿಯಾ ನಿರೋಧಕ ಶಕ್ತಿ ಇದೆ. ಬಂಗಾರದ ಕಣ್ಣುಗಳು, ಕೆಂಪು ಕಣ್ಣುಗಳು, ಹಸಿರು ಕಣ್ಣುಗಳು ಹೀಗೆ ಬಹು ವರ್ಣದ ಕಣ್ಣುಗಳನ್ನು ಮತ್ತು ಚರ್ಮವನ್ನು ಇವು ಹೊಂದಿರುತ್ತವೆ.

ಕೆಲ ಕಪ್ಪೆಗಳ ಚರ್ಮ ತುಕ್ಕು ಹಿಡಿದಂತಿರುತ್ತವೆ. ಇನ್ನೂ ಕೆಲ ಕಪ್ಪೆಗಳ ಚರ್ಮ ಊಹೆಗೂ ನಿಲುಕದಷ್ಟು ಬಣ್ಣ ಹೊಂದಿರುತ್ತವೆ. ಪ್ರಕೃತಿಯಲ್ಲಿನ ಜೀವವೈವಿಧ್ಯತೆ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ.

– ವಸಂತ್ ಮಾಲವಿ.



ಕೆಂಪು ಕಣ್ಣಿನ ಮರಕಪ್ಪೆ



ಹಸಿರು ಕಣ್ಣಿನ ಮರಕಪ್ಪೆ



ಬಿಳಿಯ ಮರಕಪ್ಪೆ